ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 106-112
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೀದರ ಜಿಲ್ಲೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ

**ಅಣ್ಣಾರಾವ ಬಸಪ್ಪ***

*ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***Abstract:***

*ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಬೀದರ ರಾಜ್ಯದ ಈಶಾನ್ಯ ಭಾಗದಲ್ಲಿದೆ. ಬೀದರ ತನ್ನ ಭೌಗೋಳಿಕ ಗಡಿಯನ್ನು ತೆಲಂಗಾಣ ಮತ್ತು ಮಹಾರಾಷ್ಟ್ರ ಗಡಿಭಾಗದೊಂದಿಗೆ ಹಂಚಿಕೊಂಡಿದೆ ಮತ್ತು ಬೀದರ ಕರ್ನಾಟಕ ರಾಜ್ಯದ ಮುಕುಟ ಎಂದು ಕರೆಯಲ್ಪಡುತ್ತದೆ. ಬೀದರ ನಗರ ತನ್ನ 'ಬಿದರಿ' ಕಲೆ ಕರಕುಶಲ ಉತ್ಪನ್ನಗಳಿಗೆ ಹೆಸರುವಾಸಿಯಾಗಿದೆ. ಮಂಜೀರಾ ನದಿ ಬೀದರ ಜಿಲ್ಲೆಗೆ ಕುಡಿಯುವ ನೀರನ್ನು ಪೂರೈಸುವ ಪ್ರಮುಖ ನದಿಗಳಲ್ಲಿ ಒಂದಾಗಿದೆ. ಪ್ರಸ್ತುತ ಲೇಖನದಲ್ಲಿ ಬೀದರ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿವರಿಸಲಾಗಿದೆ.*

***Keywords:*** *ಕರ್ನಾಟಕ, ಬೀದರ, ಬಿದರಿ, ಸಂಸ್ಕೃತಿ ಮತ್ತು ಇತಿಹಾಸ.*

**ಪೀಠಿಕೆ**

ಬೀದರ ಜಿಲ್ಲೆಯು ಭಾರತದ 22ನೇ ಸ್ವಚ್ಛನಗರ ಮತ್ತು ಕರ್ನಾಟಕ ರಾಜ್ಯದ 5ನೇ ಸ್ವಚ್ಛ ನಗರವೆಂಬ ಸ್ಥಾನ ಪಡೆದುಕೊಂಡು ಹೆಗ್ಗಳಿಕೆಗೆ ಪಾತ್ರವಾಗಿದೆ. ಬೀದರ ತನ್ನ ಭೌಗೋಳಿಕ ಗಡಿಯನ್ನು ತೆಲಂಗಾಣ ಮತ್ತು ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿರುವ ಜಿಲ್ಲೆ ಭಾಲ್ಕಿ, ಹುಮನಾಬಾದ, ಬೀದರ, ಬಸವಕಲ್ಯಾಣ ಮತ್ತು ಔರಾದ ತಾಲೂಕುಗಳು 622 ಹಳ್ಳಿಗಳು ಈ ಜಿಲ್ಲೆಯಲ್ಲಿವೆ. ಬೀದರ ಜಿಲ್ಲೆಯು 17.35 ಹಾಗೂ 18.25 ಉತ್ತರ ಅಕ್ಷಾಂಶ, 76.42 ಹಾಗೂ 77.35 ಪೂರ್ವ ರೇಖಾಂಶ ಸ್ಥಾನಗಳ ನಡುವೆ 'ಕರ್ನಾಟಕದ ಕಾಶ್ಮೀರ' ಎಂದು ಕರೆಯಿಸಿಕೊಳ್ಳುವ ಈ ಜಿಲ್ಲೆಯು ಮಹಾರಾಷ್ಟ್ರ ನಾಂದೇಡ, ಪಶ್ಚಿಮಕ್ಕೆ ಉಸ್ಮಾನಬಾದ ಜಿಲ್ಲೆಗಳಿವೆ. ಪೂರ್ವಕ್ಕೆ ತೆಲಂಗಾಣದ ನಿಜಾಮಾಬಾದ ಮತ್ತು ಮೇಧಕ ಜಿಲ್ಲೆಗಳು ಹೊಂದಿಕೊಂಡಿವೆ. ದಕ್ಷಿಣಕ್ಕೆ ಕಲಬುರಗಿ ಜಿಲ್ಲೆಯಿದೆ. ಆದುದರಿಂದ ಈ ಜಿಲ್ಲೆಯು ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳ ಗಡಿ ಸೀಮೆಯನ್ನು ಹೊಂದಿದೆ.

ಬೀದರ ಜಿಲ್ಲೆಯು ಪೂರ್ವದಿಂದ ಪಶ್ಚಿಮಕ್ಕೆ 93.4 ಕಿ.ಮೀ. ಉದ್ದಳತೆ ಹೊಂದಿದ್ದು ದಕ್ಷಿಣೋತ್ತರವಾಗಿ 115.2 ಕಿ. ಮೀ. ಇದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 5458.9 ಚ.ಕಿ.ಮೀ.ಇದೆ. ಜಿಲ್ಲೆಯಲ್ಲಿ 620 ಜನವಸತಿ ಇರುವ ಗ್ರಾಮಗಳು, 30 ಜನವಸತಿ ಇಲ್ಲದ ಗ್ರಾಮಗಳಿವೆ. ಈ ಜಿಲ್ಲೆಯಲ್ಲಿ ಕೆಲವು ಭಾಗ 'ಧರಿಪ್ರಾಂತ'ವೆಂದು ಹೆಸರಾದ ಫಲವತ್ತಾದ ಕೆಂಪು ಮಣ್ಣು ಇದ್ದು ಉಳಿದರ್ಧ ಕಪ್ಪು ಮಣ್ಣಿನದು. ಕಾರಂಜಾ, ಮಂಜಿರಾ, ಮತ್ತು ಮುಲ್ಲಾಮಾರಿ ಈ ಜಿಲ್ಲೆಯ ಪ್ರಮುಖ ನದಿಗಳಾಗಿದ್ದು, ಚುಲ್ಕಿನಾಲಾ, ಮಾಣಿಕ್ಯನಾಲಾ, ಮಧುರಾನಾಲಾ, ಮತ್ತು ಹಳ್ಳಿಖೇಡನಾಲಾಗಳು ಇನ್ನಿತರ ಪ್ರವಾಹಗಳು ಕೂಡಾ ಈ ಜಿಲ್ಲೆಯಲ್ಲಿವೆ.

***Please cite this article as:*** ಅಣ್ಣಾರಾವ ಬಸಪ್ಪ. (2022). ಬೀದರ ಜಿಲ್ಲೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 1(4), 106–112.

**ಐತಿಹಾಸಿಕ ಹಿನ್ನೆಲೆ**

ಯಾವುದೇ ಒಂದು ಪ್ರದೇಶವನ್ನು ಔನ್ನತ್ಯ, ಏಳು ಬೀಳುಗಳನ್ನು ಗಮನಿಸಬೇಕಾದರೆ ಆ ಪ್ರದೇಶದ ಹಿಂದಿನ ಸಾಂಸ್ಕೃತಿಕ ಪರಂಪರೆಯನ್ನು ಅಭ್ಯಸಿಸುವುದು ಅತ್ಯವಶ್ಯಕವಾಗಿದೆ. ಸಾಂಸ್ಕೃತಿಕ ಹಾಗೂ ಐತಿಹಾಸಿಕವಾಗಿ ಆ ಪ್ರದೇಶವು ಎಷ್ಟು ಶ್ರೀಮಂತವಾಗಿದೆ ಎಂಬುವುದನ್ನು ತಿಳಿದುಕೊಂಡಾಗ ಮಾತ್ರ ಆ ಪ್ರದೇಶದ ಆಗುಹೋಗುಗಳ ಬಗೆಗೆ ಮತ್ತು ಏಳು ಬೀಳುಗಳ ಬಗೆಗೆ ಸರಿಯಾದ ತಿಳುವಳಿಕೆ ಬರಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಬೀದರ ಪ್ರದೇಶದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಸ್ಥೂಲವಾಗಿ ಅವಲೋಕಿಸುವ ಅಗತ್ಯವಿದೆ.

ಬೀದರ ಜಿಲ್ಲೆಯ ಭೌಗೋಳಿಕವಾಗಿ ಭಾರತದ ದಖನ್ನಿನ ಮಧ್ಯಭಾಗದಲ್ಲಿದೆ. ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿದೆ. ಇಲ್ಲಿನ ಭಾಷೆ, ನೆಲ, ಜಲ, ಧರ್ಮ, ಸಾಮಾಜಿಕ ಪರಿಸರ ಸಂಪ್ರದಾಯ ಹಾಗೂ ಸಂಸ್ಕೃತಿ ಎಲ್ಲವೂ ವೈವಿಧ್ಯಮಯ ಇದೆ. ಈ ಪ್ರದೇಶದ ಚೆಲುವು ಇಲ್ಲಿಯ ಭಾಷೆಯು ಸಂಸ್ಕೃತ, ಹಿಂದಿ, ಉರ್ದು, ಮರಾಠಿ, ತೆಲುಗು, ಕನ್ನಡ, ಇಂಗ್ಲಿಷ್ ಮೊದಲಾದ ಪ್ರಾದೇಶಿಕ ಉಪಭಾಷೆಗಳು ಹಾಗೂ ಸಾಮಾಜಿಕ ಭಾಷೆಗಳ ಪ್ರಭಾವಕ್ಕೊಳಗಾಗಿರುವ ಕನ್ನಡ ಭಾಷೆ, ದಿನ ಬಳಕೆಯ ಭಾಷೆಯಾಗಿದೆ. ಈ ಪ್ರದೇಶ ಮೂಲ ಮಹಾಭಾರತದಷ್ಟು ಪ್ರಾಚೀನವಾಗಿದೆ. ಅದು ಎರಡುವರೆ ಸಾವಿರದಷ್ಟು ಐತಿಹಾಸಿಕ ಹಿನ್ನೆಲೆ ಪಡೆದುಕೊಂಡಿದೆ.

ಈ ಪ್ರದೇಶವನ್ನು ನಂದ, ಮೌರ್ಯ, ಶಾತವಾಹನ, ವಾಕಾಟಕರು, ಚಾಲುಕ್ಯರು, ರಾಷ್ಟ್ರಕೂಟರು, ಕಲಚೂರಿ, ಕಾಕತೀಯರು, ಸೇವಣರು (ಯಾದವರು) ತುಘಲಕರು, ಬಹಮನಿ, ಬರಿದಶಾಹಿ, ಮೊಘಲ, ಹಾಗೂ ನಿಜಾಮ್‌ಶಾಹಿ ಈ ಎಲ್ಲಾ ರಾಜಮನೆತನಗಳು ಬೀದರ ಪ್ರದೇಶವನ್ನು ಆಳಿದ್ದಾರೆ. ಹಲವು ಮತಧರ್ಮಗಳ ಸಂಗಮದ ಸ್ಥಾನವಾಗಿ ಪರಧರ್ಮ ಸಹಿಷ್ಣತೆಗೆ ಹೆಸರುವಾಸಿ ವೈವಿಧ್ಯಮಯ ಸಾಂಸ್ಕ್ರತಿಕ ಹಾಗೂ ಐತಿಹಾಸಿಕತೆಯನ್ನು ಒಳಗೊಂಡ ಈ ಪ್ರದೇಶ ಶಾಂತಿ, ಸಹನೆಯನ್ನೊಳಗೊಂಡ ಜಿಲ್ಲೆಯಾಗಿದೆ.

ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿ ಈ ಪ್ರದೇಶ ಬಹಳ ವಿಶಿಷ್ಟವಾದ ಹಿನ್ನೆಲೆಯನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಸಂತರು ನಡೆದಾಡಿದ್ದಾರೆ, ಶರಣರು ನುಡಿದಿದ್ದಾರೆ, ಅನುಭಾವಿಗಳು ಹಾಡಿದ್ದಾರೆ ಸೂಫಿಗಳು ಬದುಕಿದ್ದಾರೆ ಈ ಭೂಮಿ ಅದ್ಭುತವಾದ ಸಾಹಿತ್ಯವನ್ನು ಜಗತ್ತಿಗೆ ನೀಡಿದೆ ಶಿಲಾ ಶಾಸನಗಳು ಸ್ಮಾರಕಗಳು ವಾಸ್ತುಶಿಲ್ಪ ಕಲೆಗಳು ಈ ಜಿಲ್ಲೆಯಾದ್ಯಂತ ಮಹತ್ವದ ಸ್ಥಳಗಳು ಪ್ರವಾಸಿಗರ ಗಮನ ಸೆಳೆದಂತಹವುಗಳಾಗಿವೆ.

ಕಲ್ಯಾಣ ನಾಡೆಂದು ಖ್ಯಾತಿ ಪಡೆದ ಬೀದರನ್ನು ವಿದುರು ನಗರವೆಂದು ಕರೆಯಲಾಗಿದೆ. ವಿದುರು ನಗರ ಮಹಾಭಾರತದಲ್ಲಿ ಪ್ರಸಿದ್ಧವಿದೆ. ಆದರೆ ಪ್ರಾಕೃತಿಕವಾಗಿ ಬಿದಿರು ಹೆಚ್ಚು ಬೆಳೆಯುವ ಪ್ರದೇಶವಾಗಿರುವುದರಿಂದ ಬಿದಿರು–ಬಿದಿರುಪುರ–ಬಿದಿರೂರು–ಬಿದಿರೆ–ಬೀದರ ಆಗಿದೆಯೆಂದು ಭಾಷಾ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಬೀದರ ಜಿಲ್ಲೆಯ ಪ್ರಾಚೀನ ಇತಿಹಾಸವನ್ನು ಹೊಂದಿರುವ ಜಿಲ್ಲೆಯಾಗಿದೆ. ಇತಿಹಾಸದಲ್ಲಿಯೇ ಜಿಲ್ಲೆಯು ಮಂಜರಾ ಮತ್ತು ಕಾರಂಜಾ ನದಿಯ ತೀರದಲ್ಲಿರುವ ರೇಕುಳಗಿ, ಮರಕುಂದ, ಖೇಣಿರಂಜೋಳ, ಬಗದಲ್, ಅಂಬೆಸಂಗಾವಿ, ನಾರದಸಂಗಮ, ವನಮಾರಪಲ್ಲಿ, ಹಾಲಹಳ್ಳಿ, ಅಲಿಯಂಬರ, ಸಂಗನಾಳೆ, ಔರಾದ, ಮಾಸಿಮಡು, ಭಾಲ್ಕಿ, ಭಾತಂಬ್ರಾ,

ಮುಂತಾದ ಊರುಗಳಲ್ಲಿ ಶಿಲಾಯುಗದ ಮತ್ತು ನವಶಿಲಾಯುಗದ ಜನವಸತಿ ನೆಲೆಗಳಾಗಿದ್ದವೆಂದು ಸಂಶೋಧಕರು ಗುರುತಿಸಿದ್ದಾರೆ.

ರಾಜಕೀಯವಾಗಿ ಕ್ರಿ.ಪೂ. 3ನೇ ಶತಮಾನದ ಮೌರ್ಯರಿಂದ ಹಿಡಿದು ಶಾತವಾಹನ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಕಾಕತೀಯರು, ಖಿಲ್ಜಿ, ಬಹಮನಿ, ಮತ್ತು ಮೊಘಲ್ ಅರಸರ ಆಳ್ವಿಕೆಗೆ ಒಳಪಟ್ಟ ಹಿರಿಮೆ ಈ ಜಿಲ್ಲೆಗಿದೆ. ಕ್ರಿ.ಪೂ.4ನೇ ಶತಮಾನದಲ್ಲಿ ನಂದರು ಮಗಧದಿಂದ ಆಳುತಿದ್ದರು ಎಂಬುವುದಕ್ಕೆ ಅನೇಕ ಪುರಾಣಗಳಲ್ಲಿ ಪುರಾವೆಗಳಲ್ಲಿ ಸಿಗುತ್ತವೆ. ಮಹಾಪದ್ಮನೇ ನಂದ ವಂಶದ ಮೂಲ ಸ್ಥಾಪಕ. ಇವನಿಂದ ಪ್ರಾರಂಭವಾದ ಆಳ್ವಿಕೆ ಇಡೀ ದಖನ್ ಪ್ರಾಂತವು ನಂದರ ಆಳ್ವಿಕೆಗೆ ಒಳಪಟ್ಟಿತ್ತು. ಆಗ ಬೀದರ ಸಹ ಇವರ ಆಳ್ವಿಕೆಗೆ ಒಳಪಟ್ಟಿತ್ತು. ಬೀದರದಿಂದ 150 ಕಿ. ಮೀ. ಅಂತರದಲ್ಲಿರುವ ಮಹಾರಾಷ್ಟ್ರದ ನಾಂದೇಡ ನಂದರಿಗೆ ಸಂಬಂಧಿಸಿದಾಗಿದೆ. ಈ ಕಾರಣದಿಂಲೆ ಅದಕ್ಕೆ ನಾಂದೇಡ ಎಂಬ ಹೆಸರು ಬಂದಿದೆ.ಎಂದು ಅನೇಕ ವಿದ್ವಾಂಸರು ಅಬಿಪ್ರಾಯ ಪಡುತ್ತಾರೆ. ಇದರ ಹಿನ್ನೆಲೆಯಾಗಿ ನೋಡಿದಾಗ ಬೀದರ ಜಿಲ್ಲೆಯಲ್ಲಿ ನಂದಗಾಂವ ಎಂಬ ಹೆಸರಿನ ಎರಡು ಗ್ರಾಮಗಳಿವೆ.

ಈ ಭಾಗದಲ್ಲಿ ಕನ್ನಡ ಅರಸರ ಆಗಮನವಾಗುತ್ತದೆ. ಕನ್ನಡ ನಾಡಿಗರು ಎಂದು ಹೇಳಲಾಗುವ ಕದಂಬರು ಕನ್ನಡ ನಾಡಿನ ಮೊದಲ ಅರಸರಾಗಿದ್ದರು. ಕ್ರಿ. ಶ. 345–360 ರವರೆಗೆ ಆಳ್ವಿಕೆ ಮಾಡಿದ ಮಯೂರಶರ್ಮನು ಕದಂಬರ ರಾಜ್ಯದ ಸ್ಥಾಪಕನಗಿದ್ದ ಮಯೂರಶರ್ಮನ ಮಗಳಾದ ಲಕ್ಷೀದೇವಿಯನ್ನು ನಾಗವಂಶಕ್ಕೆ ಸೇರಿದ ಅಹಿಚ್ಚತ್ರ ಸಿಂಧರ ಅರಸ ನಿಡಿದೋಳ ಸಿಂದನಿಗೆ ಕೊಟ್ಟು ಮದುವೆ ಮಾಡಿದ್ದನ್ನು ಖೇಣಿ ರಂಜೋಳ ಶಾಸನವು ತಿಳಿಸುತ್ತದೆ.

ಬಾದಾಮಿಯನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಚಾಲುಕ್ಯರು ಬೀದರ ಪ್ರದೇಶವನ್ನು ತಮ್ಮ ಅಧಿಪತ್ಯದಲ್ಲಿಟ್ಟುಕೊಂಡಿದ್ದರು. ಇವರ ಮನೆತನದ ಅರಸ ವಿನಯಾದಿತ್ಯ (ಕ್ರಿ.ಶ.682– ಕ್ರಿ.ಶ.696) ಜಲಗ್ರಾಮ ತಾಮ್ರ ಶಾಸನದಲ್ಲಿ ‘ಮಯೂರಖಂಡಿ,’ ಭಲ್ಲುಂಕಿ ಎಂಬುವುಗಳು ಉಲ್ಲೇವಿದೆ. ವಿನಯಾದಿತ್ಯನ ಮಗ ವಿಜಯಾದಿತ್ಯ (ಕ್ರಿ.ಶ. 696–733) ನ ಕಾಲದ ಶಾಸನದಲ್ಲಿ ಭಲ್ಲುಂಕಿ ದೇಶ ಎಂದು ಉಕ್ತವಾಗಿದೆ. ಈ ಮಯೂರುಖಂಡಿ ಮತ್ತು ಭಲ್ಲುಂಕಿಗಳು ಬೀದರ ಜಿಲ್ಲೆಯಲ್ಲಿದ್ದು ಇಂದು ಅವು ಅನುಗುಣವಾಗಿ ಮೊರಖಂಡಿ ಮತ್ತು ಭಾಲ್ಕಿ ಎಂದು ಕರೆಯಲ್ಪಡುತ್ತದೆ.

ಬೀದರ ಜಿಲ್ಲೆಯ ನಾರಾಯಣಪೂರು, ಪ್ರತಾಪಪೂರು, ಜಯಸಿಂಹಪೂರು, ಉಜ್ಜಳಂ, ಕಲ್ಯಾಣ, ಲಂಜವಾಡಿ, ಇಂಚವೂರು, ಚಿಂಚವಳ್ಳಿ, ಘಟ್ಟಿಭೊರವಳ್ಳಿ, ಹಾಲಹಳ್ಳಿ, ಮರಿಕಲ್ಲು, ಬೀರಗೆ, ಇನ್ನೂ ಮುಂತಾದ ಅನೇಕ ಗ್ರಾಮಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಬಸವಕಲ್ಯಾಣ ತಾಲೂಕಿನ ಗೊರಟಾ ಒಂದೇ ಗ್ರಾಮದಲ್ಲಿ ಇಲ್ಲಿಯವರೆಗು ಒಂಬತ್ತು ಶಾಸನಗಳು ಪತ್ತೆಯಾಗಿವೆ.ಈ ಗೊರಟಾ ಗ್ರಾಮವು ಅಂದಿನ ಕಾಲದಲ್ಲಿ ಪ್ರಮುಖ ಅಗ್ರಹಾರ ಕೇಂದ್ರವಾಗಿತ್ತು. ಅಲ್ಲದೆ ನಾರಾಯಣಪೂರ, ಜಲಸಂಗಾವಿ, ಉಮಾಪುರ, ಭಾಲ್ಕಿ, ಔರಾದ, ಶಿವಪೂರ ಮುಂತಾದ ಕಡೆ ಅನೇಕ ದೇವಾಲಯಗಳನ್ನು ಇವರು ಕಟ್ಟಿಸಿರುವುದು ಕಂಡುಬರುತ್ತದೆ.

6ನೇ ವಿಕ್ರಮಾದಿತ್ಯನ ಕಾಲದಲ್ಲಿ ಅನೇಕ ಕವಿಗಳು ಕಲೆಗಾರರು, ಪಂಡಿತರಿದ್ದರು ಇವರಲ್ಲಿ ಬಿಲ್ಹಣ, ವಿಜ್ಞಾನೇಶ್ವರ, ವಾದಿರಾಜ ಮೊದಲಾದ ಕವಿಗಳು ಅವರ ಕಾಲದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಕಲಚೂರಿ ವಂಶದ ಬಿಜ್ಜಳನು ತರ್ದವಾಡಿಯಲ್ಲಿ ಮಹಾಮಂಡಳೇಶ್ವರನಾಗಿ ಆಳುತ್ತಿದ್ದ ಕ್ರಿ.ಶ.1157ರಲ್ಲಿ ಕಲ್ಯಾಣ ಚಾಲುಕ್ಯರ 2ನೇ ತೈಲಪನನ್ನು ಸೋಲಿಸಿ ಸಾಮ್ರಾಜ್ಯವನ್ನು ಬಿಜ್ಜಳನಿಂದ ಆಕ್ರಮಿಸಲ್ಪಟ್ಟಿತು.

ಕ್ರಿ.ಶ. 1189–1331ರ ಬೀದರ ದೊರಸಮುದ್ರದ ಹೊಯ್ಸಳರ , ದೇವಗಿರಿಯ ಯಾದವರ ಹಾಗೂ ವಾರಂಗಲ್ಲಿನ ಕಾಕತೀಯರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. 1347ರಲ್ಲಿ ಬಹಮನಿ ಸಾಮ್ರಾಜ್ಯ ಹಸನಗಂಗು ಬಹಮನಷಾಹನಿಂದ ಸ್ಥಾಪಿಲ್ಪಟ್ಟಿತ್ತು. ಕ್ರಿ.ಶ. 1358ವರೆಗೆ 11ವರ್ಷಗಳ ಕಾಲ ಆಳ್ವಿಕೆ ಮಾಡಿ ಭದ್ರ ಬುನಾದಿ ಹಾಕಿದನು. ಈ ಮನೆತನ ಅಲ್ಲಾವುದ್ದೀನ ಹಸನಗಂಗೂ ಬಹಮನಷಾಹ ನಂತರ ಒಂದನೆ ಮಹಮದಷಾ ಎರಡನೇಯ ಮಹಮ್ಮದಷಾ ಮತ್ತು ಫಿರೋಜಷಾಹ ಆಳ್ವಿಕೆ ಮಾಡಿದರು. ತದನಂತರ ಅಧಿಕಾರಕ್ಕೆ ಬಂದ ಬಹಮನಿ ಅಹ್ಮದಷಾಹನ ತನ್ನು ರಾಜಧಾನಿಯನ್ನು ಕ್ರಿ ಶ. 1422 ರಲ್ಲಿ ಗುಲಬರ್ಗಾ ದಿಂದ ಬೀದರ ಗೆ ವರ್ಗಾವಣೆ ಮಾಡಿದನು.

ಈತನು ಬೀದರ ಪ್ರದೇಶಕ್ಕೆ ಮೊಹಮ್ಮದಬಾದ ಬೀದರ ಎಂದು ಮರುನಾಮಕರಣ ಮಾಡಿದನು. ಅಲ್ಲಿನ ಹಳೆಯ ಹಿಂದೂ ಶೈಲಿಯ ಕೋಟೆಯನ್ನು ಪುನಾರಭಿವೃದ್ಧಿಯನ್ನು ಮಾಡಿದನು. ದೊಡ್ಡ ದೊಡ್ಡ ಫಿರಂಗಿಗಳನ್ನು ಸ್ಥಾಪಿಸಿದನು. ಇವನ ಕಾಲಕ್ಕೆ ಮಧ್ಯ ಪ್ರಾಚ್ಯಾದಿಂದ ಬಂದಿದ್ದ ಪರಿಸ್ತಾ ಎಂಬ ಚರಿತ್ರಕಾರನು ಬೀದರ ನಗರವನ್ನು ಸುಂದರ ಕಾರಂಜಿಗಳು ಆಹ್ಲಾದಕರ ಹವಮಾನದಿಂದ ಈ ಊರು ಆಕರ್ಷಣಿಯ ತಾಣವಾಗಿದೆ.

ಇದಲ್ಲದೆ ಅಲ್ಲಾವುದ್ದಿನನ ಕಾಲದಲ್ಲಿ ಅರಮನೆ ಮತ್ತು ಉದ್ಯಾನ ವನಗಳು ನಿರ್ಮಾಣವಾದರೆ 2ನೇ ಅಲ್ಲಾವುದ್ದಿನ ಕಾಲದಲ್ಲಿ ಅವನ ಪ್ರಧಾನಮಂತ್ರಿ ಮಹಮ್ಮದ ಗವಾನನಿಂದ ಇಲ್ಲಿ ಮದರಸ ಮಹಾವಿದ್ಯಾಲಯ ಸ್ಥಾಪಿಸಲ್ಪಟ್ಟಿತ್ತು. ಹೀಗಾಗಿ ಬೀದರ ನಗರವು ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಪ್ರಸಿದ್ಧಿ ಪಡೆಯಿತು. ಕ್ರಿ.ಶ. 1481 ರಲ್ಲಿ ಮಹಮ್ಮದಗವಾನ ಕೊಲೆಯೊಂದಿಗೆ ಬಹುಮನಿ ರಾಜ್ಯ ಪತನವಾಯಿತು. ಕ್ರಿ.ಶ. 1490ರಲ್ಲಿ ಕಾಸೀಮ ಬರೀದ ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯಿಂದ ಮುಂದೆ ಕ್ರಿ.ಶ.1619 ರ ವರೆಗೆ ಬೀದರ ಬರೀದಷಾಹಿ ಅಧಿಕಾರಕ್ಕೆ ಒಳಗಾಯಿತು. ಆದರೆ ಈ ಮದ್ಯೆ ನಡೆದ ಆಡಳಿತ ಕ್ರಿ.ಶ. 1559–1561 ಕಾಲಾವದಿಯಲ್ಲಿ ಕೆಳದಿ ಶಿವಪ್ಪ ನಾಯಕನು ವಿಜಯನಗರದ ಅರಸರು ಪರವಾಗಿ ದಂಡೆತ್ತಿ ಬಂದು ಕಲ್ಯಾಣದ ಕೋಟೆಯನ್ನು ಸ್ವಾಧೀನ ಪಡಿಸಿಕೊಂಡನು. ನಂತರ ಕ್ರಿ.ಶ. 1562ರಲ್ಲಿ ಅಹಮ್ಮದ ನಗರದ ನಿಜಾಮ್‌ಷಾಹನ್ ಕುತುಬ್‌ಷಾಹನ ನೆರವಿನಿಂದ ಈ ಕೋಟೆಯನ್ನು ಮರಳಿ ಪಡೆದುಕೊಂಡನು ಆದರೆ ಅವನ ಕೈಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲ ವಿಜಯನಗರದ ರಾಮರಾಯನು ಅವನಿಂದ ಅದನ್ನು ಕಸಿದುಕೊಂಡು ವಿಜಾಪೂರ ಆದಿಲ್‌ಶಾಹಿಗೆ ಒಪ್ಪಿಸಿದನು.

ಕ್ರಿ.ಶ. 1619ರಲ್ಲಿ ಆದಿಲ್‌ಶಾಹಿ ಮನೆತನದ ಇಬ್ರಾಹಿಂನು ಬರಿದಶಾಹಿ ವಂಶವನ್ನು ನಾಶಮಾಡಿ ಬೀದರ ಕೋಟೆಯನ್ನು ವಶಪಡಿಸಿಕೊಂಡನು. ಮುಂದೆ ಕ್ರಿ.ಶ. 1650 ರಲ್ಲಿ ಔರಂಗಜೇಬನ ವಿಜಾಪುರದ ಆದಿಲ್‌ಶಾಹಿ ಸರದಾರ ಮುಲ್ಲಾನಿಂದ ಬೀದರ ಮತ್ತು ಕಲ್ಯಾಣ ಕೋಟೆಯನ್ನು ವಶಪಡಿಸಿಕೊಂಡು ಆಳ್ವಿಕೆಗೆ ಒಳಗಾಯಿತು.

ದಖನ್ ಪ್ರದೇಶದ ವೈಸರಾಯನಾಗಿದ್ದ ಔರಂಗಜೇಬನು ಕ್ರಿ.ಶ. 1656ರಲ್ಲಿ ಬೀದರಗೆ ‘ಜಾಫರಾಬಾದ ಬೀದರ’ ಎಂದು ಹೊಸ ಹೆಸರಿಟ್ಟ ಇಪ್ತಿಯಾರ ಖಾನನನ್ನು ಇದರ ಆಡಳಿತಾಧಿಕಾರಿಯಾಗಿ ನೇಮಿಸಿದನು. ಆಗ ಈ ಭಾಗದಲ್ಲಿ ಅನೇಕ ಹಿಂದೂ ದೇವಾಲಯಗಳನ್ನು ಕೆಡವಿ ಮಸಿದಿಗಳ ನಿರ್ಮಾಣ ಕಾಯಕ ನಡೆಯಿತು. ಎಂದು ಭಾಲ್ಕಿ ತಾಲೂಕಿನ ಚಂದಾಪೂರ ಹುಮನಾಬಾದ ತಾಲೂಕಿನ ಉಡಬಾಳ ಗ್ರಾಮಗಳ ಶಾಸನಗಳಲ್ಲಿ ಉಲ್ಲೇಖವಿದೆ. ನಂತರ ಕ್ರಿ.ಶ.

1707ರಲ್ಲಿ ಔರಂಗಜೇಬನ ಮರಣದ ನಂತರ ಅಳಿಯನಿಗೆ ಈ ಭಾಗವನ್ನು ನವಾಬ ಮಿರಕಲಂದಖಾನ ಜಹಗೀರ ಆಗಿ ನೀಡಿದನು.

ನಿಜಾಮನ ಆರು ಪ್ರಾಂತ್ಯಗಳಲ್ಲಿ ಬೀದರ ಭಾಗವು ಒಂದು 1905ರಲ್ಲಿ ಬೀದರ ಜಿಲ್ಲಾ ಸ್ಥಾನಮಾನ ಪಡೆದುಕೋಂಡು ಕೊಹಿರಾ. ಜನವಾಡ. ಔರಾದ ಉದಗೀರ, ಅಹಮದಪೂರ ಮತ್ತು ನೀಲಂಗಗಳು ಸೇರಿದ್ದವು ಹೀಗೆ ಒಂಬತ್ತು ತಾಲೂಕುಗಳ ಈ ಜಿಲ್ಲೆಯಲ್ಲಿ ವೀಲಿನಗೊಂಡು. ತನ್ನದೆ ಆಡಳಿತವನ್ನು ಮಾಡುತ್ತಿದ್ದುರು. ಬಸವಕಲ್ಯಾಣ ಮಾತ್ರ ಪ್ರತೇಕ ಜಹಗೀರ 64  ಹಳ್ಳಿಗಳನ್ನು ಹೊಂದಿತ್ತು.

ಆಗಸ್ಟ 15, 1947ರಲ್ಲಿ  ಭಾರತ ಸ್ವಾತಂತ್ರ್ಯ ಪಡೆದ ನಂತರ  ಬೀದರ ಭಾಗವು ಮಾತ್ರ ಹೈದ್ರಾಬಾದ ನಿಜಾಮನ ಆಳ್ವಿಕೆಯಲ್ಲಿತ್ತು,  ಆ ರಾಜ್ಯದ  ಕೊನೆಯ ನಿಜಾಮನಾದ ಉಸ್ಮಾನ್ ಅಲಿಖಾನ ಬಹದೂರನು ತನ್ನ ರಾಜ್ಯವನ್ನು ಭಾರತದ ಒಕ್ಕೂಟಕ್ಕೆ ಒಪ್ಪಿಸಲು ನಿರೂಪಿಸಿದನು. ಈ ಭಾಗವನ್ನು ಮುಸ್ಲಿಂ ರಾಜ್ಯವನ್ನಾಗಿ ರೂಪಿಸಿದನು.  ಇದರಿಂದ  ಇದರಿಂದ ಈ ಭಾಗದಲ್ಲಿ ರಜಾಕಾರ ಚಳುವಳಿಯ ಪ್ರಾರಂಭವಾಯಿತು. ಇದರಿಂದ ಹಿಂದೂಗಳ ಮೇಲೆ ದೌರ್ಜನೆಗಳು ಅಟ್ಟಹಾಸಗಳು ಹಿಂದೂ  ಸ್ತ್ರಿಯರನ್ನು ಬಲತ್ಕಾರದಿಂದ ಅತ್ಯಾಚಾರ ಮಾಡಲಾಯಿತು ಕೊಲೆ, ಕಳ್ಳತನ, ಸುಲಿಗೆಗಳು ರಾಜರೋಷವಾಗಿ ನಡೆಯತೊಡಗಿದವು ಬಸವಕಲ್ಯಾಣ ತಾಲೂಕಿನ ಗೋರಟಾ ಗ್ರಾಮದಂತ ಎಷ್ಟೋ ಗ್ರಾಮಗಳು ಸುಟ್ಟು ಭಸ್ಮವಾದವು ಆ ಸಂದರ್ಭದಲ್ಲಿ ಬಾರತದ ಗೃಹಮಂತ್ರಿಗಳಾಗಿದ್ದು  ಸರದಾರ ವಲ್ಲಭಾಯಿ ಪಟೇಲರ ನೇತ್ರತ್ವದಲ್ಲಿ ಪೋಲಿಸ್ ಕಾರ್ಯಾಚರಣೆಯಿಂದ ನಿಜಾಮನ ರಾಜ್ಯದ ಆಳ್ವಿಕೆಯೊಂದನ್ನು ಸೆಪ್ಟೆಂಬರ್ 17, 1948 ರಂದು ಕೊನೆಗೊಳಿಸಿ ಭಾರತ ಸರಕಾರದ ಅಂಗವಾಗಿಸಿಕೊಂಡಿದೆ.

ಬೀದರ ಜಿಲ್ಲೆ ಪುನರ್ ರಚನೆಗೊಂಡು ಬಾಲ್ಕಿ, ಹುಮನಾಬಾದ, ಔರಾದ ತಾಲೂಕುಗಳು ಮಾತ್ರ ಉಳಿದವು. ಇನ್ನುಳಿದವುಗಳು ಮಹಾರಾಷ್ಟ್ರ ಮತ್ತು ಆಂದ್ರಪ್ರದೇಶ  ರಾಜ್ಯಕ್ಕೆ ಸೇರ್ಪಡೆಗೊಂಡವು. 1968ರಲ್ಲಿ ಬಸವಕಲ್ಯಾಣ ತಾಲೂಕು ರಚನೆಯಾಗಿ ಬೀದರ ಜಿಲ್ಲೆಗೆ ಸೇರಿತು. ಈ ಸದ್ಯ ಐದು ತಾಲೂಕುಗಳು 771 ಹಳ್ಳಿಗಳನ್ನು ಒಳಗೊಂಡಿದೆ. ಹೀಗೆ ಬೀದರ ಜಿಲ್ಲೆ ಚಿಕ್ಕದಾದರೂ ರಾಜಕೀಯ ಚರಿತ್ರೆ ದೀರ್ಘವಾಗಿದೆಯೆಂದು ಹೇಳಬಹುದು.

**ಸಾಂಸ್ಕೃತಿಕ  ಹಿನ್ನಲೆ**

ಭವ್ಯ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಈ ಪ್ರದೇಶವು ಸಾಂಸ್ಕೃತಿಕವಾಗಿ ಅಷ್ಟೆ ಶ್ರೀಮಂತಿಕೆಯಿಂದ ಕೂಡಿದ ಜಿಲ್ಲೆಯಾಗಿದೆ. ಶತಮಾನಗಳಿಂದ ಐತಿಹ್ಯ ಪಡೆದ ಬೀದರ ವಿವಿಧ ಜನಾಂಗ ಸಮ್ಮಿಲನದ ಸಂಕೇತ ಹಿಂದೂ–ಮುಸ್ಲಿಂ ಬಾಂಧವ್ಯದ ಕೇಂದ್ರ ಅದರಲ್ಲೂ ಗಡಿನಾಡು ಆಗಿರುವದರಿಂದ ಮರಾಠಿ, ತೆಲುಗು, ಉರ್ದು, ಹಿಂದಿ ಭಾಷೆಗಳಿಂದ ಮಿಶ್ರ ಸ್ವೀಕರಣಕ್ಕೆ ಒಳಗಾಗಿದೆ. ಶಿವಭಕ್ತರಿದ್ದ ನಾಡು ಅಲ್ಲಾನ ನಮಾಜು ಮಾಡುವವರ ಬೀಡು ಬುದ್ದ, ಮಹಾವೀರ, ಬಸವ, ಏಸುಕ್ರಿಸ್ತ, ಗುರುನಾನಕ, ಬೊಮ್ಮಗೊಂಡೇಶ್ವರ, ಬಕ್ಕಪ್ರಭು, ಮಾಣಿಕಪ್ರಭು, ಅಂಬೇಡ್ಕರ್, ಕರಿಬಸವೇಶ್ವರ ಮೊದಲಾದ ತತ್ವಸಿದ್ಧಾಂತಗಳನ್ನು ಪಾಲಿಸುತ್ತಿರುವ ಪ್ರದೇಶ ಬಹುಸಂಸ್ಕೃತಿಯ ನಾಡಾಗಿದೆ.

ಬೀದರ ಜಿಲ್ಲೆಯನ್ನು ಹಲವಾರು ರಾಜಕೀಯ ಮನೆತನಗಳು ಆಡಳಿತಕ್ಕೆ ಒಳಪಟ್ಟಿದ್ದರಿಂದ ಮತ್ತು ವಿಭಿನ್ನ ಧರ್ಮಗಳಿಗೆ ರಾಜಾಶ್ರಯ ನೀಡಿರುವುದರಿಂದ ಧರ್ಮ ಮತ್ತು ರಾಜಕೀಯ ಪಡಿನೆರಳು ಸಮಾಜದ ಮೇಲಾಗಿದೆ. ಇದರಿಂದ ಬೀದರ ಜಿಲ್ಲೆಯ ಸಾಂಸ್ಕೃತಿಕ ವೈಭವವನ್ನು ನಾವು

ಕಾಣಬಹುದಾಗಿದೆ. ಅಷ್ಟೆ ಅಲ್ಲದೆ ಅಲ್ಲಿನ ಶಿಲ್ಪಕಲೆಗಳು, ಸಾಹಿತ್ಯ ರಚನೆ, ಸ್ಮಾರಕಗಳು, ಆಧ್ಯಾತ್ಮಿಕ ಕೇಂದ್ರಗಳು, ಶಾಸನಗಳು ಸಾಕ್ಷಿಗಳನ್ನು ಒದಗಿಸಿ ಕೊಡುತ್ತವೆ. ಬೀದರ ಜಿಲ್ಲೆಯು ಮುಸ್ಲಿಂ ಆಳ್ವಿಕೆಗೆ ಒಳಪಟ್ಟಿರುವುದರಿಂದ ಅಂದಿನ ದಿನಗಳಲ್ಲಿ ಬಹಮನಿ ಸುಲ್ತಾನ ಅಹಮದ್‌ಷಾನ ಆಸ್ಥಾನದಲ್ಲಿದ್ದ ಪರ್ಷಿಯನ್ ಕವಿ ಅಧರಿ 'ಬಹಮನ ನಾಮ' ಎಂಬ ಗ್ರಂಥವನ್ನು ರಚಿಸಿದನು. ಈ ಗ್ರಂಥದಲ್ಲಿ ಬೀದರದ ವೈಭವವನ್ನು ಕುರಿತು ಬಣ್ಣಿಸಲಾಗಿದೆ.

ಮುಂದೆ ಬಂದಂತಹ ಮಹಮ್ಮದ ಗವಾನ ಉತ್ತಮ ಆಡಳಿತಗಾರನಾಗಿ 'ಮದರಸ' ಎಂಬ ಮಹಾವಿದ್ಯಾಲಯವನ್ನು ಕಟ್ಟಿಸಿದನು. ಅದು ಇಂದಿಗೂ ಸ್ಮಾರಕವಾಗಿ ಕಂಗೊಳಿಸುತ್ತಿದೆ. ಆ ಸಂದರ್ಭದಲ್ಲಿ 3000 ಹಸ್ತಪ್ರತಿಗಳ ಗ್ರಂಥಾಲಯವನ್ನು ಹೊಂದಿತ್ತು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮುಂದೆ ಹೈದ್ರಾಬಾದ ನಿಜಾಮರ ಕಾಲದಲ್ಲಿ ಇದೆ ಉರ್ದು ಹಾಗೂ ಪರ್ಷಿಯನ್ ಭಾಷೆಗಳಲ್ಲಿ ಶೇರಷಾಯರ್ ಹಾಗೂ ಖವ್ವಾಲಿ ಪ್ರಕಾರಗಳ ಸಾಹಿತ್ಯ ಸೃಷ್ಟಿಯಾಯಿತು. ಈ ಕಾಲದಲ್ಲಿ ಖಮರ್, ದಿದ್ ನಾಜಿರ್, ಅಫಜಲ್, ಸಹೆರಾ, ಅನಸಾರಿ ನಖೀ ಜಮಾಲೋದ್ದೀನ್, ಖುರುಸಿದ್ದ, ಅತಾಕಲ್ಯಾಣಿ ಮೊದಲಾದ ಕವಿಗಳಿದ್ದರು.

ಬೀದರ ಜಿಲ್ಲೆಯ ಸರ್ವಧರ್ಮಗಳ ನೆಲೆ ಬೀಡಾಗಿತ್ತು ಶ್ರೀ ರಾಮಚಂದ್ರನ ವನವಾಸದ ಅವಧಿಯಲ್ಲಿ ಈ ಭಾಗದ ನೆಲದಲ್ಲಿ ನಡೆದಾಡಿದ್ದಾನೆ ಎಂಬ ಪ್ರತೀತಿಯಿದೆ. ತರುವಾಯ ಮಹಾಭಾರತ ಕಾಲದಲ್ಲಿ ಇದು ವಿದುರು ನಗರವಾಗಿ ಪ್ರಸಿದ್ಧಿ ಪಡೆದು ಮೆರೆಯಿತು. ಕ್ರಿ.ಶ. 12ನೇ ಶತಮಾನದಲ್ಲಿ ವಚನ ಕಹಳೆ ಊದಿ ವೀರಶೈವ ಧರ್ಮವು ಜನಮಾನಸದಲ್ಲಿ ಉಳಿದಿದೆ. ಕ್ರಿ.ಶ.15ನೇ ಶತಮಾನದಲ್ಲಿ ಗುರುನಾನಕರು ಪಾದಯಾತ್ರೆ ಕೈಗೊಂಡು ಇಲ್ಲಿಗೆ ಆಗಮಿಸಿದ್ದರು ಎಂಬುದನ್ನು ಸಿಖರ ದೇವಸ್ಥಾನವೇ ಸಾಕ್ಷಿಯಾಗಿದೆ.

ಬಹಮನಿ ಸುಲ್ತಾನ ಸಂತತಿಯ ಆಳ್ವಿಕೆ ಮಾಡಿದ ಜಾಗ ಪಂಡರಾಪೂರದ ಶ್ರೀ ವಿಠಲನ ಸಂತ ದಾಮೋಜಿಪಂತನು ಸೇವಕನಾಗಿ ಇದರಿಂದ ವೈಷ್ಣವ ಪಂಥವು ಬೆಳೆಯಿತು. ಅಹಿಂಸೆ ಪರಮೋಧರ್ಮವು ಎಂಬ ಧರ್ಮ ಸತ್ಯವನ್ನು ಬೌದ್ಧ, ಜೈನ, ವೈಷ್ಣವ, ಶೈವ, ವೀರಶೈವ, ಮುಸ್ಲಿಮ್, ಸಿಖ್ ಮೊದಲಾದ ಧರ್ಮಗಳು ಇಲ್ಲಿನ ಜನರ ಜೀವನದ ಮೇಲೆ ಬೆಳಕು ಚೆಲ್ಲಿದವು.

ಬಸವಣ್ಣನವರ ಪ್ರವೇಶಕ್ಕಿಂತ ಪೂರ್ವದಲ್ಲಿ ಬೀದರ ಜಿಲ್ಲೆಯು ಅಜ್ಞಾನ, ಅಂಧಶ್ರದ್ಧೆ, ನಿರಕ್ಷರತೆ, ದೇವಾನುದೇವತೆಗಳು, ಗುಡಿಗುಂಡಾಂತರಗಳು ಕಂಡದ್ದನ್ನೆಲ್ಲ ಪೂಜಿಸುವಷ್ಟು ಅಜ್ಞಾನಿಗಳಾಗಿದ್ದರು. ದೇವರು ಧರ್ಮದ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿ ಕೊಡುತ್ತಿದ್ದರು. ಜಾತಿಭೇದ, ಲಿಂಗಭೇದ, ವರ್ಗಭೇದ ತುಂಬಿ ತುಳುಕಾಡುತ್ತಿದ್ದವು. ಇಂತಹ ಸಂದರ್ಭದಲ್ಲಿ ಶರಣರ ಉದಯದಿಂದ ಇವೆಲ್ಲವುಗಳ ವಿರುದ್ಧ ವಚನಕಾರರು ಅವುಗಳನ್ನು ಹೋಗಲಾಡಿಸಲು 'ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳೆಂಬ' ನೂತನ ತತ್ವಗಳು ಹಾಗೂ 'ಕಾಯಕ ಮತ್ತು ದಾಸೋಹ' ಏಕದೇವೋಪಾಸನೆ, ವಿಶ್ವ ಬಂದುತ್ವ ಇತ್ಯಾದಿ ಹೊಸ ಮಾನವೀಯ ಮೌಲ್ಯಗಳ ಮೂಲಕ ಪುನರುತ್ಥಾನಕ್ಕೆ ಬಂದ ವೀರಶೈವ ಧರ್ಮ ಅಂದಿನ ಜನ ಜೀವನದ ಮೇಲೆ ಪ್ರಭಾವ ಬೀರಿತು.

ಕ್ರಿ.ಶ.13ನೇ ಶತಮಾನದ ನಂತರ ಈ ಭಾಗವು ಮುಸ್ಲಿಮ್ ಆಳ್ವಿಕೆಗೆ ಒಳಪಟ್ಟಿತ್ತು. ಆಗ ಇಡಿ ಬೀದರ ಜಿಲ್ಲೆಯೊಂದೆ ಅಲ್ಲ ಬಿಜಾಪೂರ, ಗುಲಬರ್ಗಾ, ಯಾದಗಿರಿ, ರಾಯಚೂರು ಸೇರಿದಂತೆ ಈ ಭಾಗದಲ್ಲಿ ಶಾಹಿ ರಾಜ್ಯಗಳು ಆಳ್ವಿಕೆಯಲ್ಲಿ ಇಸ್ಲಾಂ ಧರ್ಮದ ಬೆಳವಣಿಗೆ ತೀವ್ರವಾಗಿತ್ತು. ಇದೇ

ಸಂದರ್ಭದಲ್ಲಿ ಸೂಫಿಗಳ ಆಗಮನವಾಗತೊಡಗಿತು. ಮುಸ್ಲಿಮರ ಆಳ್ವಿಕೆ ಹೆಚ್ಚಾದಂತೆ ಈ ಪ್ರದೇಶದಲ್ಲಿ ಸೂಫಿಗಳು, ಸಂತರು ಹೆಚ್ಚತೊಡಗಿದಂತೆ ದರ್ಗಾಗಳೂ ಹೆಚ್ಚು ಹೆಚ್ಚು ಕಾಣಿಸತೊಡಗಿದವು. ದರ್ಗಾಗಳಲ್ಲಿ ನಡೆಯುವ ಉರುಸ, ಸಂದಲ್ ಮೆರವಣಿಗೆ ಮೊಹರಂ ರಂಝಾನ ಬಕ್ರೀದ್ ಮುಂತಾದ ಹಬ್ಬ–ಹರಿದಿನಗಳ ಆಚರಣೆಗೆ ಬರತೊಡಗಿದವು. ಮುಸ್ಲಿಮರ ಹಬ್ಬಗಳು ಹಿಂದೂ ಮುಸ್ಲಿಮ್ ಭಾವೈಕ್ಯತೆಯ ಸಂಕೇತವಾಗಿ ಆಚರಿಸುವುದನ್ನು ಕಾಣುತ್ತೇವೆ.

**ಪರಮರ್ಶನ ಗ್ರಂಥಗಳು**


- ನಾಯಕ್ ಡಿ.ಬಿ. (2009). *ಕರ್ನಾಟಕ ಗ್ರಾಮ ಚರಿತ್ರೆ ಕೋಶ ಬೀದರ.* ಪ್ರಸಾರಂಗ, ಗುಲ್ಬರ್ಗ ವಿಶ್ವವಿದ್ಯಾಲಯ.
- ಸೂರ್ಯನಾಥ ಕಾಮತ್. (1973). *ಕರ್ನಾಟಕದ ಸಂಕ್ಷಿಪ್ತ ಇತಿಹಾಸ.* ಎಂಸಿಸಿ ಪಬ್ಲಿಕೇಷನ್.
- ಶಕೀಲ್ ಐ. ಎಸ್. (2019). *ಬೀದರ ಜಿಲ್ಲೆಯ ಸೂಫಿಗಳು.* ವ್ಯಾಸ ಪ್ರಕಾಶನ.
- ತಿಪ್ಪೆರುದ್ರಸ್ವಾಮಿ ಎಚ್. (1968). ಕರ್ನಾಟಕ ಸಾಂಸ್ಕೃತಿ ಸಮೀಕ್ಷೆ.  ಡಿವಿಕೆ ಪ್ರಕಾಶನ.